ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1968
ಸದಸ್ಯರ ಹೆಸರು	ಶ್ರೀ ಹೆಚ್.ಎಂ.ರಮೇಶ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	23.03.2021
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ಕಲ್ಲು ಕ್ವಾರಿ ಹಾಗೂ ಕ್ರಷರ್‌ಗಳ ಎಷ್ಟು; (ತಾಲ್ಲೂಕುವಾರು ನೀಡುವುದು)	ರಾಜ್ಯದಲ್ಲಿ ನಿರ್ದಿಷ್ಟ ಉಪಖನಿಜಗಳ ಗಣಿಗಾರಿಕೆಗಾಗಿ 521 ಕಲ್ಲುಗಣಿ ಗುತ್ತಿಗೆಗಳನ್ನು 2914 ಎಕರೆ ಪ್ರದೇಶದಲ್ಲಿ ಹಾಗೂ ನಿರ್ದಿಷ್ಟವಲ್ಲದ ಉಪಖನಿಜಗಳ ಗಣಿಗಾರಿಕೆಗಾಗಿ 2772 ಗುತ್ತಿಗೆಗಳನ್ನು 11924 ಎಕರೆ ಪ್ರದೇಶದಲ್ಲಿ ಮತ್ತು ಸ್ಟೋನ್ ಕ್ರಷರ್ ಕಾರ್ಯಾಚರಣೆಗಾಗಿ 1682 ಲೈಸೆನ್ಸ್‌ಗಳನ್ನು ಮಂಜೂರು ಮಾಡಲಾಗಿರುತ್ತದೆ. **ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.**
ಆ)	ಕಲ್ಲು ಕ್ವಾರಿ ಹಾಗೂ ಕ್ರಷರ್ ಗಳಿಗೆ ಅನುಮತಿ ನೀಡಲು ಮತ್ತು ಲೈಸೆನ್ಸ್ ನವೀಕರಣ ಮಾಡಿಕೊಳ್ಳಲು ಸರ್ಕಾರವು ನಿಗಧಿಪಡಿಸಿರುವ ಮಾನದಂಡಗಳೇನು; (ಮಾಹಿತಿ ನೀಡುವುದು)	ದಿನಾಂಕ 12.08.2016 ರಂದು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016ನ್ನು ಜಾರಿಗೆ ತಂದಿದ್ದು, ಸದರಿ ನಿಯಮಗಳಂತೆ ಸರ್ಕಾರಿ ಜಮೀನುಗಳಲ್ಲಿ ಲಭ್ಯವಿರುವ ಉಪಖನಿಜ ನಿಕ್ಷೇಪಗಳನ್ನು ಹರಾಜು ಮೂಲಕ ಮಂಜೂರು ಮಾಡಬೇಕಾಗಿರುತ್ತದೆ. ಪಟ್ಟಾ ಜಮೀನುಗಳಲ್ಲಿ ಲಭ್ಯವಿರುವ ಖನಿಜವನ್ನು ತೆಗೆಯಲು ಪಟ್ಟಾದಾರರಿಗೆ ಅಥವಾ ಪಟ್ಟಾದಾರರು ಒಪ್ಪಿಗೆ ನೀಡುವ ವ್ಯಕ್ತಿಗಳಿಗೆ ಕಂದಾಯ ಮತ್ತು ಅರಣ್ಯ ಇಲಾಖೆಗಳ ನಿರಾಕ್ಷೇಪಣಾ ಪತ್ರ, ಭೂಪರಿವರ್ತನೆ ಆದೇಶ ಮತ್ತು ಪರಿಸರ ಅನುಮತಿ ಪತ್ರ ಪಡೆದು ಕಲ್ಲು ಗಣಿಗಾರಿಕೆಗೆ ಲೈಸೆನ್ಸ್ ನೀಡಲಾಗುತ್ತಿದೆ. ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016ರ ನಿಯಮ 8-A ರಂತೆ ಕಲ್ಲುಗಣಿ ಗುತ್ತಿಗೆಗಳ ಪರಿಭಾವಿತ ಅವಧಿ ವಿಸ್ತರಣೆಗೆ ಕ್ರಮ ವಹಿಸಲಾಗುತ್ತಿದೆ.

		ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ, 2011 ಹಾಗೂ ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ನಿಯಮಗಳು, 2012 ರಂತೆ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣಾ ಪ್ರಾಧಿಕಾರಕ್ಕೆ ಕ್ರಷರ್ ಘಟಕಗಳನ್ನು ಸ್ಥಾಪಿಸಲು ಪರವಾನಗಿ ನೀಡುವ ಅಧಿಕಾರ ಪ್ರತ್ಯಾಯೋಜಿಸಲಾಗಿದೆ. ಅದರಂತೆ ಕಲಂ 6(3) ರಂತೆ ಕಂದಾಯ, ಅರಣ್ಯ ಗಣಿ ಮತ್ತು ಭೂವಿಜ್ಞಾನ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಕ್ರಷರ್ ಪರವಾನಗಿ ಕೋರಿ ಸಲ್ಲಿಸಿರುವ ಅರ್ಜಿತ ಪ್ರದೇಶವನ್ನು ಜಂಟಿ ಸ್ಥಳ ಪರಿಶೀಲನೆ ನಡೆಸಿ ಕಲಂ 6 ಮತ್ತು 6-A ರಲ್ಲಿನ ಎಲ್ಲಾ ಷರತ್ತುಗಳು ಪಾಲನೆಯಾದಲ್ಲಿ ವರದಿ ನೀಡಿದ ನಂತರ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣಾ ಪ್ರಾಧಿಕಾರದಿಂದ ಅರ್ಜಿತ ಪ್ರದೇಶವನ್ನು ಕ್ರಷರ್ ಸುರಕ್ಷಿತ ವಲಯವೆಂದು ಘೋಷಿಸಿ ಅಧಿಸೂಚನೆ ಹೊರಡಿಸಿ, ಫಾರಂ-ಬಿ1 ರಲ್ಲಿ ಅನುಪಾಲನಾ ಪ್ರಮಾಣ ಪತ್ರ ನೀಡಲಾಗುವುದು. ಅರ್ಜಿದಾರರು ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ Consent for Establishment (CFE) ಹಾಗೂ Consent for Operation (CFO) ಪಡೆದು ಹಾಜರುಪಡಿಸಿದ ನಂತರ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣಾ ಪ್ರಾಧಿಕಾರದಿಂದ ಫಾರಂ-ಸಿ (ಕ್ರಷರ್ ಲೈಸೆನ್ಸ್) ರಲ್ಲಿ ಕ್ರಷರ್ ಪರವಾನಗಿ ನೀಡಲಾಗುವುದು.
ಇ)	ಈ ಕಲ್ಲುಕ್ವಾರಿ ಮತ್ತು ಕ್ರಷರ್ ಗಳು ಸರ್ಕಾರದ ಮಾನದಂಡಗಳಂತೆ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಮೇಲ್ವಿಚಾರಣೆ ನಡೆಸುವರು ಯಾರು; ಈ ಕಲ್ಲುಕ್ವಾರಿ ಮತ್ತು ಕ್ರಷರ್‌ಗಳನ್ನು ಕಾಲಕಾಲಕ್ಕೆ ತಪಾಸಣೆ ಮಾಡಿರುವ ವರದಿಗಳೇನು; (ವಿವರ ನೀಡುವುದು)	ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 40 ರಂತೆ ಸಕ್ಷಮ ಪ್ರಾಧಿಕಾರಿಗಳಾದ ಜಿಲ್ಲಾ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಉಪನಿರ್ದೇಶಕರು / ಹಿರಿಯ ಭೂವಿಜ್ಞಾನಿಯವರು ಪ್ರತಿ ಸಾಲಿನಲ್ಲಿ ಕಲ್ಲುಗಣಿ ಗುತ್ತಿಗೆದಾರರುಗಳು ಗುತ್ತಿಗೆ ಪ್ರದೇಶದಲ್ಲಿ ಉತ್ಪಾದಿಸಿ ಸಾಗಾಣಿಕೆ ಮಾಡಿದ ಉಪಖನಿಜದ ಪ್ರಮಾಣ, ಪಾವತಿಸಿದ ಪ್ರಮಾಣದ ವಿವರಗಳ ಸಂಬಂಧ ಗುತ್ತಿಗೆ ಪ್ರದೇಶಗಳನ್ನು ಸ್ಥಳ ತಪಾಸಣೆ ಮಾಡಿಸಿ ಆಡಿಟ್ ವರದಿಯನ್ನು ಜಾರಿ ಮಾಡಲಾಗುತ್ತದೆ. ಸದರಿ ಸಮಯದಲ್ಲಿ ಗುತ್ತಿಗೆ ಪ್ರದೇಶದಲ್ಲಿ ಗಡಿ ಸ್ಥಂಭ, ನಾಮಫಲಕ ಅಳವಡಿಸಿರುವ ಹಾಗೂ ಸುರಕ್ಷತಾ ಕ್ರಮಗಳನ್ನು ಕೈಗೊಂಡಿರುವ ಬಗ್ಗೆ ತಪಾಸಣೆ ಮಾಡುತ್ತಿರುತ್ತಾರೆ.

---3

		ಕಲ್ಲುಪುಡಿ ಮಾಡುವ ಘಟಕಗಳ ಸಂಬಂಧ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಮತ್ತು ಲೈಸೆನ್ಸಿಂಗ್ ಪ್ರಾಧಿಕಾರದ ಸದಸ್ಯರುಗಳಾದ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಯಿಂದ ಕಾಲಕಾಲಕ್ಕೆ ತಪಾಸಣೆ ನಡೆಸಿ ಸದರಿಯವರು ಕ್ರಷರ್ ಲೈಸೆನ್ಸ್ ಮಂಜೂರಾತಿಗೆ ನೀಡಿರುವ Consent For Operation ನಲ್ಲಿನ ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸಿರುವ ಬಗ್ಗೆ ಕಾಲಕಾಲಕ್ಕೆ ಪರಿಶೀಲನೆ ಮಾಡುತ್ತಾರೆ.
ಈ)	ಕಳೆದ 3 ವರ್ಷಗಳಲ್ಲಿ ರಾಜ್ಯದ ಜಿಲ್ಲೆಯಲ್ಲಿರುವ ಕಲ್ಲುಕ್ವಾರಿ ಮತ್ತು ಕ್ರಷರ್ ಗಳಲ್ಲಿ ನಡೆದಿರುವ ಅವಘಡಗಳ ಬಗ್ಗೆ ಮಾಹಿತಿ ಇದೆಯೇ; ಈ ಕಲ್ಲು ಕ್ವಾರಿ ಮತ್ತು ಕ್ರಷರ್‌ಗಳ ವಿರುದ್ಧ ಕಳೆದ 3 ವರ್ಷಗಳಲ್ಲಿ ಸಾರ್ವಜನಿಕರಿಂದ ಸ್ವೀಕೃತವಾಗಿರುವ ದೂರು ಅರ್ಜಿಗಳೆಷ್ಟು; ಈ ದೂರು ಅರ್ಜಿಗಳಿಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು? (ತಾಲ್ಲೂಕುವಾರು ಮತ್ತು ಕ್ವಾರಿವಾರು ಮಾಹಿತಿಗಳನ್ನು ನೀಡುವುದು)	• ಚಾಮರಾಜನಗರ ಜಿಲ್ಲೆ ಮತ್ತು ತಾಲ್ಲೂಕು ಮಕ್ಕಡಹಳ್ಳಿ ಗ್ರಾಮದಲ್ಲಿ ಶ್ರೀ ಸ್ವಾಮಿ ಎಂಬುವರು ಪರವಾನಿಗೆ ಹೊಂದಿರುವ ಕಲ್ಲುಗಣಿಗುತ್ತಿಗೆ ಪ್ರದೇಶದಲ್ಲಿ ಇಟ್ಟಿದ್ದ ಸ್ಫೋಟಕ ಸಿಡಿದು, ದಿನಾಂಕ 28.12.2020 ರಂದು ಶ್ರೀ ಮಹದೇವಶೆಟ್ಟಿ ಎಂಬುವರು ಮೃತಪಟ್ಟಿರುತ್ತಾರೆ. • ಚಿಕ್ಕಬಳ್ಳಾಪುರ ಜಿಲ್ಲೆ, ಗುಡಿಬಂಡೆ ತಾಲ್ಲೂಕು, ಹಿರೇನಾಗವಲ್ಲಿ ಗ್ರಾಮದಲ್ಲಿ ದಿನಾಂಕ 23.02.2021 ರಂದು ಸ್ಫೋಟ ಘಟನೆ ಸಂಬಂಧ ಗುಡಿಬಂಡೆ ಪೋಲೀಸ್ ಠಾಣೆಯಲ್ಲಿ ದಿನಾಂಕ 23.02.2021 ರಂದು ಮೊಕದ್ದಮೆ ಸಂಖ್ಯೆ 0034/2021 ದಾಖಲಾಗಿದ್ದು, ಸದರಿ ಮೊಕದ್ದಮೆಯಲ್ಲಿ ನಮೂದಿಸಿರುವ ಮಾಹಿತಿಯಂತೆ ಪರವಾನಿಗೆ ಹೊಂದಿದ್ದ ಕಲ್ಲುಗಣಿ ಗುತ್ತಿಗೆ ಪ್ರದೇಶದಲ್ಲಿ ದಾಸ್ತಾನು ಮಾಡಲಾಗಿದ್ದ ಸ್ಫೋಟಕಗಳನ್ನು ನಾಶಪಡಿಸುವ ಸಂದರ್ಭದಲ್ಲಿ ಸ್ಫೋಟವು ಸಂಭವಿಸಿರುವುದು ಕಂಡುಬಂದಿರುತ್ತದೆ. • ದಿನಾಂಕ 21.01.2021 ರಂದು ಶಿವಮೊಗ್ಗ ತಾಲ್ಲೂಕು, ಕಲ್ಲಗಂಗೂರು ಗ್ರಾಮದ ವ್ಯಾಪ್ತಿಯಲ್ಲಿ ಪರವಾನಿಗೆ ಹೊಂದಿದ್ದ ಸ್ಟೋನ್ ಕ್ರಷರ್ ಘಟದ ಪ್ರದೇಶದಲ್ಲಿ ಸ್ಫೋಟಕ ಸಿಡಿದು 06 ಜನ ಕಾರ್ಮಿಕರು ಮೃತಪಟ್ಟಿರುತ್ತಾರೆ. ಮೇಲೆ ತಿಳಿಸಿರುವ ಕಲ್ಲುಗಣಿ ಪ್ರದೇಶಗಳ ಮೇಲೆ ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ.

ಸಂಖ್ಯೆ ಸಿಐ 230 ಎಂಎಂಎನ್ 2021

(ಮುರುಗೇಶ್ ಆರ್. ನಿರಾಣಿ)
ಗಣಿ ಮತ್ತು ಭೂವಿಜ್ಞಾನ ಸಚಿವರು.